# ಶಿಲ್ಪಕಲಾ ತಜ್ಞ ಡಾ|ಟಿ.ಬಿ ಸೊಲಬಕ್ಕನವರ ಇನ್ನಿಲ್ಲ

20/11/20

ಹಾವೇರಿ/ಶಿಗ್ಗಾವಿ: ಹಿರಿಯ ಶಿಲ್ಪ ಕಲಾವಿದ, ಕರ್ನಾಟಕ ಬಯಲಾಟ ಅಕಾಡೆಮಿ ಅಧ್ಯಕ್ಷ ಹಾಗೂ ಗೊಟಗೋಡಿ ಉತ್ಸವ ರಾಕ್ ಗಾರ್ಡನ್ ಸ್ಥಾಪಕ ಡಾ|ತಿಪ್ಪಣ್ಣ ಬಸವಣ್ಣೆಪ್ಪ ಸೊಲಬಕ್ಕನವರ (74) ಅನಾರೋಗ್ಯದಿಂದ ಗುರುವಾರ ನಿಧನರಾಗಿದ್ದಾರೆ.

ಶಿಗ್ಗಾವಿ ತಾಲೂಕಿನ ಹುಲಸೋಗಿ ಗ್ರಾಮದ ಡಾ|ಟಿ.ಬಿ. ಸೊಲಬಕ್ಕನವರ ಶಿಲ್ಪಕಲೆ ಹಾಗೂ ಜಾನಪದ ಕಲಾ ಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. ಶಿಸ್ತಿನ ಜೀವನ, ಸರಳ ಸಜ್ಜನಿಕೆಯ ವ್ಯಕ್ತಿತ್ವ ಮೈಗೂಡಿಸಿಕೊಂಡಿದ್ದ ಅವರು, ಸ್ನೇಹಪರತೆಗೆ ಹೆಸರುವಾಸಿಯಾಗಿದ್ದರು. ಅವರ ಕಲಾ ಸೇವೆ ಪರಿಗಣಿಸಿ ರಾಜ್ಯ ಸರ್ಕಾರ 2005, ನ.1ರಂದು ರಾಜ್ಯೋತ್ಸವ ಪ್ರಶಸ್ತಿ, 2008ರಲ್ಲಿ ಜಾನಪದ ವಿವಿ ಗೌರವ ಡಾಕ್ಟರೇಟ್ ನೀಡಿ ಗೌರವಿಸಿತ್ತು. ಜಾನಪದ ಕ್ಷೇತ್ರಕ್ಕೆ ಸಲ್ಲಿಸಿದ ಸೇವೆಗೆ ಗೌರವ ರೂಪವಾಗಿ ಕರ್ನಾಟಕ ಬಯಲಾಟ ಅಕಾಡೆಮಿ ಅಧ್ಯಕ್ಷರನ್ನಾಗಿ ನೇಮಿಸಿದ್ದರಿಂದ ಬಾಗಲಕೋಟೆಯಿಂದಲೇ ಕರ್ತವ್ಯ ನಿರ್ವಹಿಸುತ್ತಿದ್ದರು. ದೊಡ್ಡಾಟ-ಸಣ್ಣಾಟ-ಬಯಲಾಟ ಕ್ಷೇತ್ರವನ್ನು ಅಭಿವೃದ್ಧಿಪಡಿಸುವುದಕ್ಕಾಗಿ ತಮ್ಮ ಜೀವನವನ್ನೇ ಮುಡಿಪಾಗಿಟ್ಟಿದ್ದರು.



**ರಾಕ್ ಗಾರ್ಡನ್ 8 ವಿಶ್ವ ದಾಖಲೆ:** ಉತ್ಸವ ರಾಕ್ ಗಾರ್ಡನ್ 8 ವಿಶ್ವದಾಖಲೆಗಳಲ್ಲಿ ಹೆಸರಿಸಲ್ಪಟ್ಟಿರುವುದು ಸೊಬಕ್ಕನವರ ಕಲಾ ವೈಖರಿಗೆ ಕೈಗನ್ನಡಿ. ಇವರ ನೇತೃತ್ವದಲ್ಲಿ ಬಾಗಲಕೋಟೆ ಜಿಲ್ಲೆಯ ಆಲಮಟ್ಟಿ ಜಲಾಶಯ ಆವರಣದಲ್ಲಿ ಕೃಷ್ಣ ಲವ-ಕುಶ ಗಾರ್ಡನ್ ಹಾಗೂ ನವನಗರದಲ್ಲಿ ಜಾನಪದ ಪ್ರದರ್ಶನಾಲಯ, ಉತ್ತರ ಕನ್ನಡ ಜಿಲ್ಲೆಯ ಶಿರಸಿ ತಾಲೂಕಿನ ಚಿಪಗಿಯಲ್ಲಿ ಶ್ಯಾಮಲಾ ಪಾರ್ಕ್, ದಾಂಡೇಲಿಯಲ್ಲಿ ನೇಚರ್ ಕ್ಯಾಂಪ್, ಮಹಾರಾಷ್ಟ್ರದ ಕೊಲ್ಹಾಪುರದಲ್ಲಿ ಶ್ರೀ ಸಿದ್ಧಗಿರಿ ಕನೇರಿ ಮಠದ ಉದ್ಯಾನವನ, ಪುನಾದಲ್ಲಿ ರಾಮ ಸಂಸ್ಕೃತಿ ಪಾರ್ಕ್, ಬಳ್ಳಾರಿಯಲ್ಲಿ ಕುಂಟೆಗದ್ದೆ ಗಾರ್ಡನ್, ಗದಗನಲ್ಲಿ ಭೀಷ್ಮಾ ಸರೋವರ ಪ್ರಾಣಿ ಸಂಗ್ರಹಾಲಯ, ಮುಂಡರಗಿ ತಾಲೂಕಿನ ಸಿಂಗಟಾಲೂರ ಪಾರ್ಕ್, ಬೆಂಗಳೂರಿನಲ್ಲಿ ಜೆ.ಸಿ.ಪಾರ್ಕ್ ನಿರ್ಮಾಣಗೊಂಡಿದ್ದು ಇವರ ಕಲಾ ಕೌಶಲ್ಯಕ್ಕೆ ಸಾಕ್ಷಿಯಾಗಿ ನಿಂತಿವೆ.

ಮೃತರ ಪಾರ್ಥಿವ ಶರೀರ ಗೊಟಗೋಡಿಗೆ ಆಗಮಿಸುತ್ತಿದ್ದಂತೆ ಕುಟುಂಬ ಸದಸ್ಯರ ಆಕ್ರಂದನ ಮುಗಿಲು ಮುಟ್ಟಿತ್ತು. ನೂರಾರು ಕಲಾವಿದರು ಅಂತಿಮ ದರ್ಶನ ಪಡೆದರು. ಸರ್ಕಾರಿ ಗೌರವದೊಂದಿಗೆ ಲಿಂಗಾಯತ ಧರ್ಮದ ವಿಧಿ ವಿಧಾನಗಳೊಂದಿಗೆ ಶಿಗ್ಗಾವಿ ತಾಲೂಕಿನ ಧುಂಡಶಿ ರಸ್ತೆಯ ಪಕ್ಕದ ಅವರ ಜಮೀನಿನಲ್ಲಿ ಗುರುವಾರ ಮಧ್ಯಾಹ್ನ ಅಂತ್ಯಕ್ರಿಯೆ ನೆರವೇರಿತು.

**ಸಂತಾಪ:** ಹಾವೇರಿ ಜಿಲ್ಲಾ ಉಸ್ತುವಾರಿ ಸಚಿವ ಬಸವರಾಜ ಬೊಮ್ಮಾಯಿ, ಕೇಂದ್ರ ಸಚಿವ ಪ್ರಹ್ಲಾದ ಜೋಶಿ, ಮಾಜಿ ಸಂಸದ ಮಂಜುನಾಥ ಕುನ್ನೂರು, ವಿಪ ಸದಸ್ಯ ಸೋಮಣ್ಣ ಬೇವಿನಮರದ ಸೇರಿದಂತೆ ಹಲವು ಗಣ್ಯರು ಸಂತಾಪ ಸೂಚಿಸಿದ್ದಾರೆ.